# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತೊಂಬತ್ತನೆಯ ಅಧಿವೇಶನ**

**ಕಾರ್ಯಕಲಾಪಗಳ ಪಟ್ಟಿ**

**ಶುಕ್ರವಾರ, 11ನೇ ಅಕ್ಟೋಬರ್, 2019**
**(ಸಮಯ: ಬೆಳಗ್ಗೆ 11.00 ಗಂಟೆಗೆ)**

******

**01. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಶ್ರೀ ಬಿ.ಎಸ್. ಯಡಿಯೂರಪ್ಪ** (ಮುಖ್ಯಮಂತ್ರಿಗಳು) ಅವರು:-

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಪಂಚಾಯತ್‌ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯನ್ನು ಸಭೆಯ ಮುಂದಿಡುವುದು.

ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ (ಸಂಖ್ಯೆ-2) ವರದಿಯನ್ನು ಸಭೆಯ ಮುಂದಿಡುವುದು.

ಇ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸಾಮಾನ್ಯ ಹಾಗೂ ಸಾಮಾಜಿಕ ವಲಯದ (ಸಂಖ್ಯೆ-4) ವರದಿಯನ್ನು ಸಭೆಯ ಮುಂದಿಡುವುದು.

**02. ವಿತ್ತೀಯ ಕಾರ್ಯಕಲಾಪ**

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)** ಅವರು:- 2019-20ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಒಪ್ಪಿಸುವುದು.

**03. ವರದಿಗಳನ್ನೊಪ್ಪಿಸುವುದು**

**ಅ) ಶ್ರೀಮತಿ ವೀಣಾ ಅಚ್ಚಯ್ಯ** (ಸದಸ್ಯರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ) ಅವರು **ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ** 2018-19ನೇ ಸಾಲಿನ **35ನೇ** ವರದಿಯನ್ನು ಒಪ್ಪಿಸುವುದು.

......2

**ಆ) ಶ್ರೀ ಎನ್.ಎಸ್.ಭೋಸರಾಜು** (ಸದಸ್ಯರು, ಅಧೀನ ಶಾಸನ ರಚನಾ ಸಮಿತಿ) ಅವರು **ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ** 2018-19ನೇ ಸಾಲಿನ **47ನೇ** ವರದಿ (42ನೇ ವರದಿಯ ಅನುಸರಣಾ ವರದಿ)ಯನ್ನು ಒಪ್ಪಿಸುವುದು.

## 04. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

| | |
|---|---|
| **ಶ್ರೀಯುತರುಗಳಾದ:**<br>**ಎಸ್.ಆರ್. ಪಾಟೀಲ್, ವಿ.ಪ.ನಾ.**<br>**ಅಲ್ಲಂ ವೀರಭದ್ರಪ್ಪ**<br>**ಎನ್. ಎಸ್. ಭೋಸ್‌ರಾಜು**<br>**ಶರಣಪ್ಪ ಮಟ್ಟೂರ**<br>**ಬಸವರಾಜ ಶಿವಲಿಂಗಪ್ಪ ಹೊರಟ್ಟಿ**<br>**ಕೆ.ಟಿ.ಶ್ರೀಕಂಠೇಗೌಡ**<br>**ಹಾಗೂ ಇತರರು** | ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಉಂಟಾಗಿರುವ ಅನಾಹುತದಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಪರಿಹಾರ ಒದಗಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ. |

## 05. ಗಮನ ಸೆಳೆಯುವ ಸೂಚನೆಗಳು

ಅ) **ಶ್ರೀ ಕೆ.ಸಿ. ಕೊಂಡಯ್ಯ** ಅವರು ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಜಾತಿಗಣತಿಯ ಸಮೀಕ್ಷೆಯನ್ನು ನಡೆಸಲಾಗಿದ್ದು, ವರದಿಯನ್ನು ಮಂಡಿಸದಿರುವ ಬಗ್ಗೆ **ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ, ಸಮಾಜ ಕಲ್ಯಾಣ ಸಚಿವರ** ಗಮನ ಸೆಳೆಯುವುದು

ಆ) **ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** ಅವರು ಅನುದಾನ ರಹಿತ ಆಂಗ್ಲ ಮಾಧ್ಯಮ ಶಾಲೆಗಳ ಸಿಬ್ಬಂದಿಯವರಿಗೆ ಸಿಗಬೇಕಾದ ಕನಿಷ್ಠ ಸೌಲಭ್ಯಗಳನ್ನು ಒದಗಿಸದಿರುವ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸುವ ಬಗ್ಗೆ **ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ, ಕಾರ್ಮಿಕ ಸಚಿವರ** ಗಮನ ಸೆಳೆಯುವುದು.

ಇ) **ಶ್ರೀ ಕೆ.ಟಿ ಶ್ರೀಕಂಠೇಗೌಡ** ಅವರು ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಯಿಸಲಾದ ಅನೇಕ ಕೊಳವೆ ಬಾವಿಗಳಿಗೆ ಇದುವರೆವಿಗೂ ವಿದ್ಯುತ್ ಸಂಪರ್ಕವನ್ನು ಒದಗಿಸದೆ ಇರುವ ಬಗ್ಗೆ **ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ, ಸಮಾಜ ಕಲ್ಯಾಣ ಸಚಿವರ** ಗಮನ ಸೆಳೆಯುವುದು

ಈ) **ಶ್ರೀ ಅ.ದೇವೇಗೌಡ** ಅವರು ರಾಜ್ಯ ಒಕ್ಕಲಿಗರ ಸಂಘದಲ್ಲಿ ನಡೆದಿರುವ ಅಧಿಕಾರ ದುರುಪಯೋಗ, ಕಾನೂನು ಬಾಹಿರ ಕೆಲಸ ಮತ್ತು ಅವ್ಯವಹಾರಗಳ ಬಗ್ಗೆ ಮಾನ್ಯ **ಗೃಹ ಮತ್ತು ಸಹಕಾರ ಸಚಿವರ** ಗಮನ ಸೆಳೆಯುವುದು.

......3

**೦೬. ನಿಯಮ ೩೩೦ರ ಮೇರೆಗೆ**

ಅ) **ಶ್ರೀ ಮರಿತಿಬ್ಬೇಗೌಡ** ಅವರು ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ 2015ನೇ ಸಾಲಿನಿಂದ ಭಾರತ್-೦೩ ವಾಯುಮಾಲಿನ್ಯ ನಾಲ್ಕು ಚಕ್ರದ ಸಾವಿರಾರು ವಾಹನಗಳನ್ನು ಕಾನೂನು ಬಾಹಿರವಾಗಿ ಅಧಿಕಾರಿಗಳು ಶಾಮೀಲಾಗಿ ನೋಂದಣಿ ಮಾಡಿರುವುದಲ್ಲದೆ, ಇಲಾಖೆಯ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವುಂಟು ಮಾಡಿರುವ ಬಗ್ಗೆ ಪ್ರಸ್ತಾಪಿಸುವುದು.

ಆ) **ಶ್ರೀ ಐವನ್ ಡಿ' ಸೋಜಾ** ಅವರು ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿ ಗ್ರಾಮ ಪಂಚಾಯತಿ ಕಾನೂನು ಬದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದರೂ ಜಿಲ್ಲಾ ಪಂಚಾಯತ್ ಬರ್ಕಾಸ್ತು ಮಾಡಲು ನಿರ್ಣಯ ಕೈಗೊಂಡಿರುವ ಬಗ್ಗೆ ಪ್ರಸ್ತಾಪಿಸುವುದು.

ಇ) **ಶ್ರೀ ಪಿ.ಆರ್. ರಮೇಶ್** ಅವರು ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂಪರಿವರ್ತನೆಯಾಗದೆ ಅನಧಿಕೃತವಾಗಿ ನಿರ್ಮಿಸಿರುವ ರೆವಿನ್ಯೂ ನಿವೇಶನಗಳಿಗೆ ಸುಧಾರಣಾ ವೆಚ್ಚ/ಮೇಲ್ವಾಟು ವೆಚ್ಚ ಪಾವತಿಸಿಕೊಂಡು ಸದರಿ ನಿವೇಶನಗಳನ್ನು ಸಕ್ರಮಗೊಳಿಸುವ ಯೋಜನೆ ಬಗ್ಗೆ ಪ್ರಸ್ತಾಪಿಸುವುದು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---